

## ಕನ್ನಡ ಸಂಭ್ರಮ

ನ. 7ರ ಕನ್ನಡ ರಾಜ್ಯೋತ್ಸವ ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ 'ಡಿಜಿಟಲ್ ಯುಗದೊಳ್ ಕನ್ನಡದ ಬಾಳ್' (ಲೇ:ಗಣೇಶ ವೈದ್ಯ), 'ರಾಜ್ಯೋತ್ಸವ ಎಂಬ ಥೀಮ್ ಪಾರ್ಟಿ' (ಲೇ: ಗುರುಪ್ರಸಾದ್ ಕಾಗಿನೆಲೆ), ಲೇಖನಗಳು ಸಮಯೋಚಿತವಾಗಿದೆ. ಕನ್ನಡ ಭಾಷೆಗೆ ಡಿಜಿಟಲ್‌ನ ಸಿಂಪಡಣೆ ಈ ಕಾಲಘಟ್ಟದಲ್ಲಿ ಅತಿ ಅವಶ್ಯಕವೆನಿಸಿರುವುದು ಸಾಧುವಾಗಿದೆ. ಕನ್ನಡ ಭಾಷೆಯ ಬೆಳವಣಿಗೆಗೆ ತಮ್ಮನ್ನು ಒಡ್ಡಿಕೊಂಡಿರುವ ಹಲವು ಮಹನೀಯರ ಸೇವೆ ಬೆಳಕಿಗೆ ಬರಲು ಸುಧಾ ಬಳಗದ ಪ್ರಯತ್ನ ಶ್ಲಾಘನೀಯ. ಹಾಗೆಯೇ ಗುರುಪ್ರಸಾದ್ ಕಾಗಿನೆಲೆಯವರ ಅಮೆರಿಕದ ಕನ್ನಡಸಂಘಗಳ ಅಭಿಮಾನಪೂರ್ವಕ ಕನ್ನಡ ರಾಜ್ಯೋತ್ಸವದ ಸಡಗರ ಸಂಭ್ರಮದ ಆಚರಣೆಯ ಲೇಖನ ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡಿತು.

—ಎಸ್. ಪ್ರಭಾ, ಬೆಂಗಳೂರು

## ಒಡ್ತಾ ಒಡ್ತಾ ಆರೋಗ್ಯ

ಅ. 24 ಸಂಚಿಕೆ ಉತ್ತಮವಾಗಿ ಮೂಡಿಬಂದಿದೆ. ಕಾವ್ಯಶ್ರೀ ಎನ್. ಅವರು ಬರೆದಿರುವ 'ಒಡ್ತಾ ಒಡ್ತಾ ಆರೋಗ್ಯ' ಲೇಖನ ಉಪಯುಕ್ತ ಮಾಹಿತಿಗಳನ್ನು ಒದಗಿಸಿದೆ. ಸದಾ ಮನುಷ್ಯ ಚಟುವಟಿಕೆಯಿಂದ ಇದ್ದರೆ ರೋಗ ಬಲು ದೂರ ಎಂಬ ಅರಿವನ್ನು ಮೂಡಿಸಿದ ಲೇಖನವದು ಎದುರೆ ತಪ್ಪಾಗಲಾರದು. 'ಮಿಲ್ ಫೋರ್ಡ್ ಸೌಂಡ್' ಬಗ್ಗೆ ಡಾ. ಶೇಖರ್ ಗೌಳೇರ್ ಬರೆದಿರುವ ಪ್ರವಾಸ ಕಥನ ಮತ್ತು ಚಿತ್ರಗಳೂ ಮನಸೂರೆಗೊಂಡವು. ಸಂಗೀತ ಸಿದ್ಧಿಪುರುಷ ಕದ್ರಿಯವರ ಕುರಿತು ಉಮಾ ಅನಂತ್ ಬರೆದಿರುವ ನೆನಪಿನ ಲೇಖನ ಸಂಗ್ರಹಯೋಗ್ಯವಾಗಿತ್ತು. ಮಳೆನೀರು ಸಂಗ್ರಹದ ಸಾಧನೆಯ ಹರಿಕಾರರ ಪರಿಚಯ ಲೇಖನಗಳು ತುಂಬಾ ಚೆನ್ನಾಗಿ ಮೂಡಿ ಬಂದಿವೆ.

—ವಿನಾಯಕ.ಆರ್. ರಾಯಚೂರು



## ಸಂಗೀತಗಿರಿಯ ಸ್ಮರಣೆ

ಅ.24ರ ಸಂಚಿಕೆಯಲ್ಲಿ ಉಮಾ ಅನಂತ್ ಬರೆದ 'ಸ್ಯಾಕ್ಸೊಫೋನ್ ಸಿರಿ; ಕದ್ರಿ ಎಂಬ ಸಂಗೀತಗಿರಿ' ಲೇಖನ ಚೆನ್ನಾಗಿತ್ತು. ಅನೇಕ ದಶಕಗಳ ಕಾಲ ತಮ್ಮ ಸ್ಯಾಕ್ಸೊಫೊನ್ ವಾದನದಿಂದ ಸಂಗೀತಾಭಿಮಾನಿಗಳನ್ನೂ, ಸಂಗೀತ ದೇವತೆಯನ್ನೂ ತೃಪ್ತಿಪಡಿಸಿದ ಹಾಗು ವಿಶ್ವದಾದ್ಯಂತ ಸಹೃದಯರನ್ನು ರಂಜಿಸಿದ ಕದ್ರಿ ಗೋಪಾಲನಾಥ ಈಗಿಲ್ಲ. ಆದರೆ ಅವರು ನುಡಿಸುತ್ತಿದ್ದ ಶ್ರೀ , ಹಂಸಧ್ವನಿ, ಮಧ್ಯಮಾವತಿ, ಕಲ್ಯಾಣಿ, ಮಾಂಡ್, ಕದನಕುತೂಹಲ, ಯಮನ್ ಕಲ್ಯಾಣ್ ಇತ್ಯಾದಿ ರಾಗಗಳನ್ನು ಕೇಳುವಾಗ ಕದ್ರಿ ನಮ್ಮ ಸ್ಮರಣೆಗೆ ಬಂದೇ ಬರುತ್ತಾರೆ. ಕದ್ರಿಯವರ ಬಹುತೇಕ ಕಛೇರಿಗಳಲ್ಲಿ ಪಿಟೀಲು ಸಾತ್ ನೀಡುತ್ತಿದ್ದ ಕನ್ಯಾಕುಮಾರಿಯವರ ಅನುಭವ–ನುಡಿಗಳನ್ನು ಲೇಖಕರು ತಮ್ಮ ಲೇಖನದಲ್ಲಿ ದಾಖಲಿಸಬಹುದಿತ್ತು.

—ಪಿ.ಎ. ಸುಧೀಂದ್ರ, ಬೆಂಗಳೂರು

## ಸಾರ್ಥಕ ದೀಪಾವಳಿ!

ಅ. 31ರ ಸಂಚಿಕೆಯಲ್ಲಿ ಶಶಿಕುಮಾರ್ ಸಿ. ಬರೆದಿರುವ 'ದೃಷ್ಟಿಹೀನರಿಗೆ ದೀಪಾವಳಿ' ಲೇಖನ ತುಂಬ ಚೆನ್ನಾಗಿತ್ತು. ದೃಷ್ಟಿಹೀನರ ಕಣ್ಣ ಬೆಳಗುವ ಪುಣ್ಯ ಕಾರ್ಯವನ್ನು ಪ್ರೇರೇಪಿಸಿದ ಉತ್ತಮ



ಲೇಖನವಿದು. 'ಕಣ್ಣುಗಳ ಮೂಲಕ ಹಣತೆ ಹಚ್ಚುವ ಸಮಯ...' ಎನ್ನುತ್ತಾ ದೀಪಾವಳಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನೀಡಿದ ಕರೆ ನಿಜವಾಗಿಯೂ ಕಾಳಜಿಪೂರ್ಣವಾದದ್ದು. 'ಹಚ್ಚಬೇಕು ಹಣತೆ ಕಣ್ಣಿನಿಂದ ಕಣ್ಣಿಗೆ!' 'ಕಣ್ಣಪ್ಪ ಆಗುವುದು ಕಷ್ಟವೇನಲ್ಲ!' ಇವೇ ಮೊದಲಾದ ಉಕ್ತಿಗಳು ಅರಿವಿನ ಹಣತೆ ಬೆಳಗಿದವು! ನೇತ್ರದಾನ ಸೇವಕರ ಸ್ವಾರ್ಥರಹಿತ ಸೇವೆಗೆ ಸಲಾಂ. ನೇತ್ರದಾನದ ಕುರಿತಾದ ತಿಳಿಯದ ಅದೆಷ್ಟೋ ಮಾಹಿತಿಗಳನ್ನು ಲೇಖನ ಸವಿವರವಾಗಿ ನಿರೂಪಿಸಿದೆ.

—ವೀಣಾ ಜೋಶಿ, ಬಾರ್ಕೂರು

## ನೀರು ನಿಧಿಯ ಅಮೂಲ್ಯ ಲೇಖನಗಳು

ಕಳೆದ ಹತ್ತು ವಾರಗಳಿಂದ ಕೃಷಿ ತಜ್ಞ ಶ್ರೀಪಡ್ರೆ ಅವರು ಬರೆಯುತ್ತಿರುವ 'ನೀರು ನಿಧಿ' ಸರಣಿ ಲೇಖನಗಳು ಒಂದಕ್ಕಿಂತ ಇನ್ನೊಂದು ಉಪಯುಕ್ತವಾಗಿತ್ತು. ತಮ್ಮ ಬರಹಗಳಲ್ಲಿ ಅವರು ಮಳೆ ನೀರಿನಿಂದಾಗುವ ಪ್ರಯೋಜನಗಳ ಬಗ್ಗೆ ಪ್ರಾಯೋಗಿಕ ಅಂಶಗಳನ್ನೇ ಓದುಗರಿಗೆ ಕೊಟ್ಟಿದ್ದಾರೆ. ರಾಜ್ಯದ ಅನೇಕ ಕಡೆಗಳಲ್ಲಿ ಸುತ್ತಾಡಿ, ಮಾಹಿತಿ ಸಂಗ್ರಹಿಸಿ ಸಮಾಜ ಆರೋಗ್ಯಪೂರ್ಣವಾಗಿರಬೇಕೆಂಬ ಅವರ ಕಾಳಜಿಗೆ ನಾನು ಉಪಕೃತ. ಅವೆಲ್ಲವನ್ನೂ ಸಾರ್ವಜನಿಕರು ಸದ್ಬಳಕೆ ಮಾಡಿಕೊಂಡಲ್ಲಿ ಅನೇಕ ಸಮಸ್ಯೆಗಳಿಗೆ ಮುಕ್ತಿ ಸಾಧ್ಯ.

ಈಗಿನ ಸಂದರ್ಭಕ್ಕೆ ನೀರು ನಿಧಿಯೇ ಸರಿ. ನೀರಿಗೆ ನೀರೇ ಸಾಟಿಯೇ ಹೊರತು ಪರ್ಯಾಯ ಇಲ್ಲ. ಅದು ಜೀವಜಲ; ಅದನ್ನು ನಾವು ಕಾಪಾಡಿದರೆ ಅದು ನಮ್ಮನ್ನು ಸಲಹುತ್ತದೆ. ಇಂತಹ ಅಮೂಲ್ಯ ಬರಹವನ್ನು ಪ್ರಕಟಿಸಿದ 'ಸುಧಾ'ಕ್ಕೆ ಕೃತಜ್ಞತೆಗಳು.

—ರುದ್ರಮೂರ್ತಿ ಎಂ. ಜೆ., ಚಿತ್ರದುರ್ಗ

## ಗ್ಯಾಜೆಟ್ ಮಾಹಿತಿ ಬೇಕು

ಕಳೆದ ಆರೇಳು ತಿಂಗಳಿನಿಂದ ನಾನು ಸುಧಾ ವಾರಪತ್ರಿಕೆಯನ್ನು ಅತೀ ಸೂಕ್ಷ್ಮವಾಗಿ ಗಮನಿಸಿ ಓದುತ್ತಿದ್ದೇನೆ. ಹಲವಾರು ಹೊಸ ಪ್ರಯೋಗಗಳನ್ನು ಮಾಡುತ್ತಿದ್ದೀರಿ. ಪ್ರತಿವಾರ ಸ್ಥಿರ ಅಂಕಣಗಳು, ವಿನ್ಯಾಸದಲ್ಲೂ ಬದಲಾವಣೆ ಕಂಡಿದೆ. ಅತ್ಯಂತ ಗಮನ ಸೆಳೆದದ್ದು ಕಿರುಚಿತ್ರದ ಕುರಿತ ಹಾಗೂ ತಂತ್ರಜ್ಞಾನದ ಕುರಿತ ಒಂದು ಪುಟದ ಲೇಖನಗಳು. ಚಿಕ್ಕದಾಗಿ ಚೊಕ್ಕವಾಗಿ ಮಾಹಿತಿ ಕಟ್ಟಿಕೊಡುವ ಈ ಎರಡೂ ಅಂಕಣಗಳು ನನಗೆ ಇಷ್ಟ. ಗೌರಿ ಮತ್ತು ಸಿರಿ ಅವರಿಗೆ ಧನ್ಯವಾದ.

ಯುವಕರಲ್ಲಿ ಮೊಬೈಲ್‌ನ ಗೀಳು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ನಾನು ಮತ್ತು ನನ್ನ ಬಹುತೇಕ ಸ್ನೇಹಿತರು ಮೊಬೈಲ್‌ಗಳ ಬಗ್ಗೆ ತಿಳಿದುಕೊಳ್ಳಲು ಪತ್ರಿಕೆ ಹಾಗೂ ಮ್ಯಾಗಜೀನ್‌ಗಳನ್ನು ಹೆಚ್ಚಾಗಿ ಆಶ್ರಯಿಸುತ್ತೇವೆ. ವಿಶ್ವಾಸಾರ್ಹವಾಗಿ ಬರೆದಿರುತ್ತಾರೆ ಎಂಬ ಕಾರಣಕ್ಕೆ. ಆದರೆ, ಸುಧಾ ವಾರಪತ್ರಿಕೆಯಲ್ಲಿ ಮೊಬೈಲ್ ಹಾಗೂ ಗ್ಯಾಜೆಟ್ ಬಗ್ಗೆ ಯಾವುದೇ ಲೇಖನಗಳು ಬರುತ್ತಿಲ್ಲ. ಯಾಕೆ? ಮೊಬೈಲ್ ರಿವ್ಯೂಗಳು ಬಂದರೆ ಅನುಕೂಲವಾಗುತ್ತದೆ. ಯುವಕರನ್ನು ಆಕರ್ಷಿಸಬಹುದು ಎಂಬುದು ನನ್ನ ಅಭಿಪ್ರಾಯ.

—ಮಂಜುನಾಥ್ ಜಿ.ಕೆ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in